**ಸಾಕ್ಷಿಯನ್ನು ದಿಃ 21.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ದಿನ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ನನಗೆ ಸೇರಿದ್ದು. ಅದಕ್ಕೆ ಸಂಬಂಧಿಸಿದಂತೆ ಆರ್.ಸಿ., ವಿಮೆ, ಡಿ.ಎಲ್ ಇದೆ ಹಾಜರು ಪಡಿಸಿಲ್ಲ. ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತ ದಿಃ 25.03.2024 ರಂದು ಆಗಿದೆ. ಆ ದಿನ ಮಹದೇವ ಪುರ ಮುಖ್ಯ ರಸ್ತೆಯಿಂದ ಮೈಸೂರಿನ ಕಡೆ ಹೋಗುತ್ತಿದ್ದೆ. ಅದು ಮುಖ್ಯ ರಸ್ತೆ ಎಂದರೆ ಸರಿ. ಆದ ಕಾರಣ ವಾಹನ ದಟ್ಟಣೆ ಇರುತ್ತದೆ ಅಷ್ಟಾಗಿ ಇರುವುದಿಲ್ಲ ಎನ್ನುತ್ತಾರೆ. ಎದುರುದಾರರು ಅಜೀತ್ ಸೇಠ್ ನಗರದ ಕಮಾನಿನ ಕಡೆಯಿಂದ ಅತಿವೇಗವಾಗಿ ಬಂದು ಡಿಕ್ಕಿ ಪಡಿಸಿರುತ್ತಾರೆ. ಎದುರುದಾರರನ್ನು ನಾನು 15 ಅಡಿ ಅಂತರದಲ್ಲಿ ಗಮನಿಸಿದ್ದೇನೆ. 15 ಅಡಿ ದೂರದಲ್ಲಿ ಗಮನಿಸಿದಾಗ ನನ್ನ ವಾಹನವನ್ನು ನಿದಾನವಾಗಿ ಚಲಿಸಬಹುದಿತ್ತು ಎಂದರೆ ನಾನು ಎಡಬದಿಯಲ್ಲಿ ನಿದಾನವಾಗಿ ಹೋಗುತ್ತಿದ್ದೆ ಎನ್ನುತ್ತಾರೆ. ನಾನು ನೇರ ರಸ್ತೆಯಲ್ಲಿ ಹೋಗುತ್ತಿದ್ದು ಎದುರುದಾರರೇ ಅಡ್ಡ ರಸ್ತೆಯಿಂದ ಬಂದು ಡಿಕ್ಕಿ ಪಡಿಸಿರುತ್ತಾರೆ ಎನ್ನುತ್ತಾರೆ. ಪೋಲೀಸರಿಗೆ ದೂರನ್ನು ನನ್ನ ಅಣ್ಣ ನೀಡಿರುತ್ತಾರೆ. ಅವರಿಗೆ ನಾನೇ ಕರೆ ಮಾಡಿ ಅಪಘಾತದ ವಿಚಾರ ಹೇಳಿದ್ದಾರೆ. ನನಗೆ ಆಗ ಪ್ರಜ್ಞೆ ಇತ್ತು. 10 ನಿಮಿಷದಲ್ಲಿ ಅಣ್ಣ ಸ್ಥಳಕ್ಕೆ ಬಂದಿದ್ದು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅಪಘಾತ ಆದ ತಕ್ಷಣ ಪೋಲೀಸರಿಗೆ ದೂರು ನೀಡಲು ಅಣ್ಣನಿಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದೂರು ನೀಡಿದ್ದಾರೆ ಎನ್ನುತ್ತಾರೆ. ಎದುರುದಾರರು ಖರ್ಚು ನೀಡಲು ಒಂದು ತಿಂಗಳು ಸಮಯ ಕೇಳಿದ್ದು ಆನಂತರ ಕರೆ ಮಾಡಿದಾಗ ಅವರು ಪುನಃ ಸಮಯ ಕೇಳಿದ ಕಾರಣ ಒಂದೂವರೆ ತಿಂಗಳ ನಂತರ ದೂರು ನೀಡಿದ್ದೇವೆ.

2. ಡಾ. ಕರುಣಾಕರ ಆಸ್ಪತ್ರೆಗೆ ನಾನು ದಾಖಲಾಗಿದ್ದೇನೆ. ಅಲ್ಲಿ ಮೂರು ದಿನ ದಾಖಲಾಗಿದ್ದೆ. ಬಿಡುಗಡೆಯಾದ ನಂತರ ಮತ್ತೆ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪದೇ ಪದೇ ಆಸ್ಪತ್ರೆಗೆ ಹೋದ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ವೈಧ್ಯರು ಕೆಲಸ ಮಾಡಬೇಡಿ

ಎಂದು ದೃಢಪತ್ರ ನೀಡಿಲ್ಲ ಮೌಖಿಕವಾಗಿ ತೂಕ ಎತ್ತಬಾರದು ಎಂದು ಹೇಳಿದ್ದಾರೆ. ವ್ಯವಸಾಯ ಮಾಡುವ ಬಗ್ಗೆ ಆರ್.ಟಿ.ಸಿ ಹಾಜರು ಪಡಿಸಿಲ್ಲ. ಗಾರೆ ಕೆಲಸ ಮಾಡುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ವಿಮಾ ಕಂಪನಿಯವರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಎದುರುದಾರರ ವಾಹನದಿಂದ ಅಪಘಾತ ಆಗಿದೆ ಎಂದು ಯಾವುದೇ ದಾಖಲೆಗಳಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳನ್ನು ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳು ವಾಸಿಯಾಗಿದೆ ಎಂದರೆ ಸರಿಯಲ್ಲ. ಈಗಲೂ ನಿಲ್ಲಲು ಆಗುವುದಿಲ್ಲ ಎನ್ನುತ್ತಾರೆ. ನಾನು ಈ ಹಿಂದೆ ಮಾಡುತ್ತಿದ್ದ ಕೆಲಸವನ್ನೇ ಈಗಲೂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.